(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—ಕಳೆದ ವಾರ ಈ ಸದನದಲ್ಲಿ ನಡೆದಂಥ...

(ಗೊಂದಲ)

ಉಪಾಧ್ಯಕ್ಷರು.—ಹೀಗೆ ೨-೩ ಜನ ಮಾತನಾಡಿದರೆ ಏನು ಅರ್ಥವಾಗುತ್ತದೆ.

(ಗೊಂದಲ)

ಡಾ॥ ಎನ್. ಬಿ. ನಂಜಪ್ಪ.—ಸುರೇಶ್ ಎನ್ನತಕ್ಕಂಥ ಒಬ್ಬ ನನ್ನ ಕಾನ್‌ಸ್ಟಿಟ್ಯೂಯೆನ್ಸಿ ಹುಡುಗ...

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—ಸಾಧಾರಣವಾದಂಥ ವ್ಯಾವಹಾರದಲ್ಲಿ ನಾನು ಆಪಾದನೆ ಮಾಡುತ್ತೇನೆ ಎಂದು ಅಲ್ಲ. ಕನಿಷ್ಪ ಈ ಗವರ್ನಮೆಂಟಿನ ಸೆಳೆಯುವ ಸೂಚನೆ ತೆಗೆದುಕೊಳ್ಳುವಾಗ ಒಂದು ವಿರೋಧ ಪಕ್ಷಕ್ಕೆ ಒಂದು ಆಳುವ ಪಕ್ಷಕ್ಕೆ ಕೊಡುವುದು ಒಂದು ಪದ್ಧತಿ. ಈ ನಡುವೆ ಆದು ಬರುವುದಿಲ್ಲ ಎಂದು ಆಪಾದನೆ ಮಾಡುವಾಗ ಅವರು ಕೊಡುವುದು ಅನ್ ಇಂಪಾರ್ಟೆಂಟ್ ಎಂದು ಹೇಳುವುದಿಲ್ಲ. ದಯಮಾಡಿ ಈ ಕಡೆಗೆ ಒಂದು, ಆ ಕಡೆಗೆ ಒಂದು ಕೊಡುವ ವ್ಯವಸ್ಥೆ ಮಾಡಿ.

ಉಪಾಧ್ಯಕ್ಷರು.—ಹಾಕಿಸೋಣ.

(ಗೊಂದಲ)

ಡಾ॥ ಎನ್. ಬಿ. ನಂಜಪ್ಪ.—ಮಾನ್ಯ ಉಪಾಧ್ಯಕ್ಷರೆ, ಬಹಳ ಮುಖ್ಯವಾದ ಮತ್ತು ಗಹನವಾದ ವಿಚಾರ ಎಂದು ಹೇಳುತ್ತೇನೆ. ಆಸ್ಟ್ರೇಲಿಯ ವಿಚಾರ ಮಾತನಾಡಿದೆವು ನನ್ನ ಕ್ಷೇತ್ರಕ್ಕೆ ಸೇರಿದ ಹುಡುಗನ ಬಗ್ಗೆ ಹೇಳಬೇಕಾಗಿದೆ. ನನಗೆ ದಯವಿಟ್ಟು ಎರಡು ನಿಮಿಷ ಅವಕಾಶಕೊಡಿ. I do not want to kill the time of this House. I know, what is the value of time. Unnecessarily they spend time.

ಉಪಾಧ್ಯಕ್ಷರು.—ಶಿವರಾಮೇಗೌಡರು ಆ ವಿಷಯದ ಬಗ್ಗೆ ಹೇಳಿದ್ದಾರೆ.

## ಇಂಡಿಯಾದಿಂದ ವಿದ್ಯಾಭ್ಯಾಸಕ್ಕೆಂದು ಆಸ್ಟ್ರೇಲಿಯಾಕ್ಕೆ ಹೋದ ವಿದ್ಯಾರ್ಥಿಗಳು ಬೀದಿ ಪಾಲಾಗಿರುವ ಬಗ್ಗೆ

ಡಾ॥ ಎನ್. ಬಿ. ನಂಜಪ್ಪ.—೧೯೮೮ರಲ್ಲಿ ಮದ್ರಾಸಿನಲ್ಲಿ ಇಂಟರ್‌ವ್ಯೂ ನಡೆಸಿದ ಮೇಲೆ ಈ ಸುರೇಶ್ ಎಂಬ ಹುಡುಗ ಆಸ್ಟ್ರೇಲಿಯಾಕ್ಕೆ ವಿದ್ಯಾಭ್ಯಾಸ ಮಾಡುವುದಕ್ಕೆ ಹೋಗಿ ಎರಡು, ಎರಡೂವರೆ ವರ್ಷಗಳ ಕಾಲ ಅಲ್ಲಿ ವಿದ್ಯಾಭ್ಯಾಸಮಾಡಿ, ಅಲ್ಲಿ ಸರ್ಟಿಫಿಕೇಟ್ ಇಲ್ಲದೆ ಮತ್ತು ಅದಕ್ಕೆ ರೆಕಗ್ನಿಷನ್ ಇಲ್ಲ ಎಂದು ಗೊತ್ತಾದಮೇಲೆ, ಇವನು ಮತ್ತು ಇವನ ಜೊತೆಯಲ್ಲಿದ್ದಂಥ ಇನ್ನೂ ೬೦ ವಿದ್ಯಾರ್ಥಿಗಳು ಇಂಡಿಯಾದೇಶದಿಂದ ಆಸ್ಟ್ರೇಲಿಯಾಕ್ಕೆ ಹೋದಂಥವರು ಬೀದಿಪಾಲಾಗಿದ್ದಾರೆ. ಆ ಹುಡುಗ ಆಸ್ಟ್ರೇಲಿಯಾದ ಕೋರ್ಟಿಗೆ ಕೇಸ್ ಹಾಕಿದ ಮೇಲೆ, ಅಲ್ಲಿ ಏನು ಇನ್‌ಸ್ಟಿಟ್ಯೂಷನ್ ನಡೆಸುತ್ತಿದ್ದಾರೋ, ಅವರು ಆಸ್ಟ್ರೇಲಿಯನ್ ಡಾಲರ್ಸ್ ರೂಪದಲ್ಲಿ ೩೦೫೭.೫೫ ಡಾಲರ್ಸ್ ದಂಡವಾಗಿ ಅವನು ಖರ್ಚು ಮಾಡಿರತಕ್ಕಂಥಾದ್ದಕ್ಕೆ ಕೊಡಬೇಕೆಂದು ಡಿಸೈಡ್ ಆಗಿದೆ. ಹೀಗೆ ಡಿಸೈಡ್ ಆದಮೇಲೆ ಎರಡು ವರ್ಷಗಳ ಹಿಂದೆ ಮದ್ರಾಸ್‌ನಲ್ಲಿ ಯಾರು ಇಂತಹ ಒಂದು ಕೆಲಸ ಮಾಡಿದ್ದಾರೋ, ಅದೇ ವ್ಯಕ್ತಿ ಇವತ್ತು ಬೆಂಗಳೂರಿನಲ್ಲಿ ಅದೇರೀತಿ ಅಡ್ವೆರೆಟೈಸ್‌ಮೆಂಟ್ ಕೊಟ್ಟು ಹಾಲಿಡೇ ಇನ್ ಹೋಟೆಲಿನಲ್ಲಿ ಉಳಿದುಕೊಂಡು ಹುಡುಗ ಹುಡಿಗಿಯವರಿಗೆ ಇಂಟರ್‌ವ್ಯೂ ನಡೆಸಿದ್ದಾರೆ. ೬೦ ಜನ ಹುಡುಗರಿಗೆ ಮೋಸ ಮಾಡಿ ಬೀದಿ ಪಾಲು ಮಾಡಿದಂತಹವನು ಇವತ್ತು ಬೆಂಗಳೂರಿನಲ್ಲಿರುವುದರಿಂದ, ಅವನ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಇದರ ಬಗ್ಗೆ ಇನ್ ವೆಸ್ಟಿಗೇಷನ್ ಆಗಬೇಕು. ಕೂಡಲೇ ಆತನನ್ನು ಕೂಡಲೆ ಬಂಧಿಸಬೇಕೆಂದು ಹೇಳುತ್ತೇನೆ. ಇದಕ್ಕೆ ಸಂಬಂಧಪಟ್ಟ ಎಲ್ಲ ಮಾಹಿತಿಗಳನ್ನು ತಮಗೆ ಕಳುಹಿಸಿಕೊಡುವುದಕ್ಕೆ ನಾನು ಸಿದ್ಧನಿದ್ದೇನೆ.

ಉಪಾಧ್ಯಕ್ಷರು.—ನಿಮ್ಮಹತ್ತಿರ ಇರತಕ್ಕ ಮಾಹಿತಿಯನ್ನು ದಯವಿಟ್ಟು ಕಳುಹಿಸಿಕೊಡಿ.